**CC 272/2024**

**ಪ್ರಧಾನ ದಿವಾಣಿ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ.ಗಳ**
**ನ್ಯಾಯಾಲಯ, ವಿಜಯನಗರ ಜಿಲ್ಲೆ, ಹೊಸಪೇಟೆ.**
**ಸಿಸಿ ನಂಬರ್ 272/2024**

**ಸಿ ಡಬ್ಲೂ -2**
**ಪಿ ಡಬ್ಲೂ -1**

**ಸಾಕ್ಷಿಯ ಹೆಸರು - ಗುರುಪ್ರಸಾದ್**
**ತಂದೆಯ ಹೆಸರು - ಯರಿಸ್ವಾಮಿ**
**ವಯಸ್ಸು - 32 ವರ್ಷಗಳು**
**ಉದ್ಯೋಗ - ಸ್ಟುಡಿಯೋ**
**ವಾಸಸ್ಥಳ - ಹೊಸಪೇಟೆ**

**ಸಾಕ್ಷಿಯನ್ನು ದಿನಾಂಕಃ 07-03-2026 ರಂದು ಪ್ರಾಮಾಣೀಕರಿಸಲಾಯಿತು.**

**ಮುಖ್ಯ ವಿಚಾರಣೆಃ ಎ. ಪಿ. ಪಿ. ಅವರಿಂದ**

ಈಗ ನಾನು ನೋಡುತ್ತಿರುವ ದಾಖಲೆಯಲ್ಲಿನ ಸಹಿ ನನ್ನದೇ ಆಗಿರುತ್ತದೆ. ಸಾಕ್ಷಿ ಕೃತ್ಯ ಸ್ಥಳ ಪಂಚನಾಮೆಯಲ್ಲಿನ ಸಹಿ ನೋಡಿ ಗುರುತಿಸಿರುತ್ತಾರೆ. ಸದರಿ ಪಂಚನಾಮೆಯನ್ನು ನಿಪಿಃ 1 ಎಂದು, ಸಾಕ್ಷಿಯ ಸಹಿಯನ್ನು ನಿಪಿಃ 1(ಎ) ಎಂದು ಗುರುತಿಸಲಾಯಿತು.

ಸದರಿ ಸಹಿಯನ್ನು ಈಗ್ಗೆ 1 ½ ವರ್ಷಗಳ ಹಿಂದೆ ತಾಲ್ಲೂಕು ಕಚೇರಿ ಮುಂಭಾಗದಲ್ಲಿ ಮಾಡಿರುತ್ತೇನೆ. ಸದರಿ ಪಂಚನಾಮೆಯನ್ನು ಚಾಸಾ -1 ರವರು ತಮಗೆ ಯಾರೋ ಕರೆ ಮಾಡಿದ್ದ ಬಗ್ಗೆ ಮತ್ತು ಆ ಕರೆ ಬಂದಾಗ ತಾವು ಯಾವ ಸ್ಥಳದಲ್ಲಿ ಇದ್ದರು ಎಂಬುದನ್ನು ತೋರಿಸಿದ ಬಗ್ಗೆ ಮಾಡಲಾಗಿದೆ. ಅವರಿಗೆ ಕರೆ ಮಾಡಿದ ವ್ಯಕ್ತಿ ಯಾರು ಎಂದು ನನಗೆ ಗೊತ್ತಿಲ್ಲ. ಪಂಚನಾಮೆ ಕಾಲಕ್ಕೆ ನಾನು, ಚಾಸಾ -1 ಮತ್ತು 3 ರವರು ಸ್ಥಳದಲ್ಲಿ ಹಾಜರಿದ್ದೇವು. ಪಂಚನಾಮೆಯನ್ನು ಮಧ್ಯಾಹ್ನ ಮಾಡಿರುತ್ತಾರೆ.

ಈಗ ನಾನು ನೋಡುತ್ತಿರುವ **4** ಫೋಟೋಗಳಲ್ಲಿನ ವ್ಯಕ್ತಿ ನಾನೇ ಇರುತ್ತೇನೆ. ಸದರಿ ಫೋಟೋಗಳನ್ನು ಒಟ್ಟಾಗಿ ನಿಪಿಃ **2** ಎಂದು ಗುರುತಿಸಲಾಯಿತು.

**(ಈ ಹಂತದಲ್ಲಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀಸವಾಲು ಮಾಡಲು ಮಾನ್ಯ ಎ.ಪಿ.ಪಿ. ಅವರು ಅನುಮತಿ ಕೇಳಿದ್ದು, ಅನುಮತಿಯನ್ನು ನೀಡಲಾಯಿತು.)**

**<u>ಪಾಟೀ ಸವಾಲು ಮಾನ್ಯ ಎ ಪಿ ಪಿ ಅವರಿಂದಃ</u>**

ಚಾಸಾ -1 ರವರು ತಾವು ಪಂಚನಾಮೆ ಆದ ಸ್ಥಳದಲ್ಲಿ ದಿಃ 13-12-2022 ರಂದು ಮಧ್ಯಾಹ್ನ 2.30 ಗಂಟೆಗೆ ಇದ್ದಾಗ ಮೊಬೈಲ್ ಸಂಖ್ಯೆ 7795515286 ರಿಂದ ವಿಜಯ ಭಾಸ್ಕರ ಎಂದು ಪರಿಚಯಿಸಿಕೊಂಡು ಆ ವ್ಯಕ್ತಿ ತಾನು ಕರ್ನಾಟಕ ಮುಖ್ಯ ಮಂತ್ರಿಗಳ ಸ್ಪೇಷಲ್ ಆಫಿಸರ್ ಎಂದು ಗುರುತಿಸಿಕೊಂಡು ಚಾಸಾ -1 ರವರಿಗೆ ಎಕವಚನದಲ್ಲಿ ಮತ್ತು ಎರು ಧನಿಯಲ್ಲಿ ಮಾತನಾಡಿಸಿದ್ದರು ಎಂದು ತಿಳಿಸಿದ್ದರು ಅಂದರೆ ಸರಿಯಲ್ಲ. ಸದರಿಯವರು ಡಿಡಿಎಲ್ ಆರ್ ಕಚೇರಿಯ ಹತ್ತಿರ ಎಕೆ ಗಲಾಟೆ ಮಾಡುತ್ತಿದ್ದೀರಿ ಎಂದು ಚಾಸಾ -1 ರವರಿಗೆ ಮುಖ್ಯ ಮಂತ್ರಿಗಳ ಕಚೇರಿಯ ಹೆಸರಿನ ಸೋಗು ಹಾಕಿಕೊಂಡು ಹೆದರಿಸಿರುತ್ತಾರೆ ಅಂದರೆ ಸರಿಯಲ್ಲ. ಸದರಿ ವಿಚಾರ ಗೊತ್ತಿದ್ದರೂ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಅಂದರೆ ಸರಿಯಲ್ಲ.

<u>**ಪಾಟೀ ಸವಾಲು ಆರೋಪಿ ಪರ ಶ್ರೀ ಎಸ್ ಎನ್ ಬಿ ವಕೀಲರಿಂದಃ** ಇಲ್ಲಾ.</u>

**(**ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.**)**

ಓ. ಹೆ. ಕೇ. ಸರಿ ಇದೆ.

ಪ್ರಧಾನ ದಿವಾಣಿ ನ್ಯಾಯಾಧೀಶರು ಹಾಗೂ
ಜೆ.ಎಂ.ಎಫ್.ಸಿ., ವಿಜಯನಗರ ಜಿಲ್ಲೆ, ಹೊಸಪೇಟೆ.

**CC 272/2024**